

ಚಪ್ಪಲಿಗಳು ಶೂ ರ್‍ಯಾಕಿನಲ್ಲಿರುವಂತೆ ನಾನಾ ನಮೂನೆಯ ಚೀಲಗಳು ವಾರ್ಡ್‌ರೋಬಿನಲ್ಲಿರುತ್ತವೆ.

ಮಹಿಳಾ ಸಾಹಿತಿಗಳಿಗೆ ಮಾತ್ರ ಈ ಯಾವ ಬ್ಯಾಗುಗಳ ಹಂಗೂ ಇಲ್ಲ. ಎಲ್ಲಿಗೆ ಹೋಗುವುದಿದ್ದರೂ ತಾವು ಬರೆದ ನಾಲ್ಕು ಪುಸ್ತಕಗಳು, ಎರಡು ಪೆನ್ನು, ನೀರಿನ ಬಾಟಲಿ ಇಟ್ಟುಕೊಳ್ಳಲು ಅವರಿಗೆ ಜೋಳಿಗೆ ಸಾಥಿ.


ಆಗಾಗ ಎಲೆಅಡಿಕೆಯನ್ನು ಅಗಿಯುವ ಅಭ್ಯಾಸದ ಹಳ್ಳಿಯ ಮುದುಕಿಯರಿಗೆ ಸಂಚಿ ಸದಾ ಯೂಸರ್ ಫ್ರೆಂಡ್ಲಿ. ಹೊನ್ನಮ್ಮ ತನ್ನ ರಾಣಿಗೆ ಎಲೆಅಡಿಕೆ ಪೂರೈಸಲೆಂದು ಸಂಚಿಯನ್ನು ಇಟ್ಟುಕೊಂಡಿದ್ದಳಂತೆ. ಕೆಲವು ಹೆಂಗಸರು ಈ ಚೀಲಗಳ ಗೋಜಲು ಬೇಡವೆಂದು ದುಡ್ಡು ಇರುವ ಪರ್ಸನ್ನು ರವಿಕೆಯೊಳಗೆ ಜೋಪಾನವಾಗಿಟ್ಟುಕೊಳ್ಳುತ್ತಾರೆ. ಆರಾಮಕ್ಕೆ ಆರಾಮವೂ ಆಯಿತು, ಕಳ್ಳತನದ ಭಯವೂ ಇರುವುದಿಲ್ಲ.

ಹೆಂಗಸರ ಈ ವ್ಯಾನಿಟಿ ಬ್ಯಾಗುಗಳ ಲೋಕ ಸ್ವತಃ ಅವರವರ ಗಂಡಂದಿರಿಗೂ ಅಪರಿಚಿತ. ಪರ್ಸನಲ್ ಡೈರಿಯಂತೆ ಅದು ಅತ್ಯಂತ ಖಾಸಗಿ. 'ನೋಡಬಾರದು ಚೀಲದೊಳಗನು' ಎನ್ನುವ ವೈದೇಹಿಯವರು, 'ವ್ಯಾನಿಟಿ ಬ್ಯಾಗಿನಲಿ ಕೈಹಾಕಿ ನೋಡುವುದು ಎಂದಿಗೂ ಉಚಿತವಲ್ಲ ಪುರುಷರೇ' ಎಂದು ಗಂಡಸರಿಗೆ ಕಿವಿಮಾತು ಹೇಳುತ್ತಾರೆ. ಗಂಡಸರು ಮಾತ್ರವಲ್ಲ – ಮಗಳೊಬ್ಬಳು ತನ್ನ ತಾಯಿಗೂ ವ್ಯಾನಿಟಿ ಬ್ಯಾಗನ್ನು ನೋಡಲುಬಿಡದ ವಸುಧೇಂದ್ರರ ಕತೆಯೊಂದು ಇಲ್ಲಿ ನೆನಪಾಗುತ್ತಿದೆ. ಅದರೊಳಗಿರುವುದು ಹಣ, ಕ್ರೆಡಿಟ್ ಕಾರ್ಡು, ಲಿಪ್‌ಸ್ಟಿಕ್, ಚಾಕೊಲೇಟು, ಕರ್ಚೀಫು, ತ್ರೀಫೋಲ್ಡ್ ಕೊಡೆ, ಆಪತ್ಕಾಲಕ್ಕೆ ಪೆಪ್ಪರ್ ಸ್ಪ್ರೇ, ಮೆಣಸಿನಪುಡಿ. ಆದ್ದರಿಂದ ಯಾವುದೇ ಬಗೆಯ ವ್ಯಾನಿಟಿ ಬ್ಯಾಗುಗಳನ್ನು ಜಾಲಾಡಿದರೂ ಅದರೊಳಗಿರುವ ವಸ್ತುಗಳು ಮಾತ್ರ ಕಾಮನ್. ಅದು ಬೇಕಾದರೆ **Gucci** ಬ್ಯಾಗೇ ಆಗಿರಲಿ ಅಥವಾ ಹಳೆಬಟ್ಟೆಯ ಬ್ಯಾಗೇ ಇರಲಿ.

ಗಂಡಸರು ನೋಡಬಾರದಷ್ಟೇ ಎಂದೇನಲ್ಲವೇ? ಹಿಡಿದುಕೊಳ್ಳಬಾರದು ಎಂಬ ರೂಲೇನು ಇಲ್ಲವಲ್ಲ. ಮಾಲುಗಳಲ್ಲಿ, ಶಾಪಿಂಗ್ ಕಾಂಪ್ಲೆಕ್ಸುಗಳಲ್ಲಿ ಕಣ್ಣಿನಲ್ಲಿಯೇ ಎಲ್ಲಾ ಅಂಗಡಿಗಳನ್ನು ಸ್ಕ್ಯಾನ್ ಮಾಡುತ್ತಾ ಹೋಗುವ ಹೆಂಡಂದಿರ ಹಿಂದೆ, ಗಂಡಂದಿರು ಹೊಟ್ಟೆಯಲ್ಲಿ ಕ್ಯಾಂಗರೂಗಳಂತೆ ಹಸುಗೂಸನ್ನು ಕಟ್ಟಿಕೊಂಡು ಒಂದು ಕೈಯಲ್ಲಿ ಶಾಪಿಂಗ್ ಬ್ಯಾಗುಗಳನ್ನೂ, ಇನ್ನೊಂದು ಕೈಯಲ್ಲಿ ಹೆಂಡತಿಯ ವ್ಯಾನಿಟಿ ಬ್ಯಾಗನ್ನೂ ಹಿಡಿದು ಬರುವ ದೃಶ್ಯಕ್ಕೆ ವಿಶೇಷ ಅರ್ಥ ಕಲ್ಪಿಸಬಾರದು!

ಹೆಣ್ಣು ಮಕ್ಕಳಿಗೆ ಸೀರೆ, ಒಡವೆ, ಪಾತ್ರೆಗಳ ಮೇಲಿರುವ ಮಮತೆಯಂತೆ ಬ್ಯಾಗುಗಳ ಮೇಲೂ ವಿಶೇಷ ಆಸ್ಥೆ. ಎಷ್ಟೇ ಸಂಖ್ಯೆಯ ಬ್ಯಾಗುಗಳು ಮನೆಯಲ್ಲಿದ್ದರೂ ಹೊಸ ಬ್ಯಾಗು ಕೊಟ್ಟೊಡನೆ ಹೆಂಗಸರ ಮುಖ ಅರಳಿಯೇ ಅರಳುತ್ತದೆ. ಹಾಗೆಯೇ ಯಾವುದೇ ಹೊಸ ಜಾಗಕ್ಕೆ ಹೋದರೂ ಅಲ್ಲೊಂದು ಹೊಸ ಚೀಲದ ಖರೀದಿಯಾಗಲೇಬೇಕು. (ಉಪಯೋಗಿಸುತ್ತಾರೋ ಅಥವಾ ಇನ್ಯಾರಿಗೋ ದಾಟಿಸುತ್ತಾರೋ – ಅದು ನಂತರದ ವಿಷಯ). ಜಯನಗರ, ಗಾಂಧಿಬಜಾರು ಮುಂತಾದ ಶಾಪಿಂಗ್ ಕಾಂಪ್ಲೆಕ್ಸುಗಳಲ್ಲಿ ನೇತಾಡುವ ಬ್ಯಾಗುಗಳು ಅಲ್ಲಿನ ಹೂವಿನ ಮಾರುಕಟ್ಟೆಗಳ ಸುಗಂಧದ ಹಾರಗಳಿಗೆ ಸಡ್ಡು ಹೊಡೆಯುವಂತಿರುತ್ತವೆ. ಸರಿಯಾಗಿ ಗಮನಿಸಿದರೆ ಹೆಚ್ಚಿನ ಬ್ಯಾಗುಗಳ ಅಂಗಡಿಯಿರುವುದು ಬಟ್ಟೆಯಂಗಡಿಗಳ ಪಕ್ಕವೇ. ಬಟ್ಟೆ ಕೊಂಡವರು ಅದಕ್ಕೆ ಸರಿಯಾದ ಬ್ಯಾಗು ಕೊಂಡೇಕೊಳ್ಳುತ್ತಾರೆ ಎಂಬ ಗ್ರಾಹಕ ಮೆಂಟಾಲಿಟಿ ಬಲ್ಲ ವ್ಯಾಪಾರೀ ಚತುರತೆಯದು.

ಕೆಲಸಮಯದ ಹಿಂದೆ ಒಂದು ಕಾರ್ಯಕ್ರಮಕ್ಕೆ ಹೋಗಿದ್ದಾಗ ಭಾಷಣಗಾರ್ತಿಯೊಬ್ಬರು 'ಬ್ಯಾಗು ಎನ್ನುವುದು ಹೆಣ್ಣಿನ ಅಂತರಂಗದ ಪ್ರತಿಧ್ವನಿ. ಒಂದು ಅಂತರದ, ಹಲವು ಅಂತರಗಳ, ಕಳ್ಳ ಕಿಸೆಗಳು ಇರುವಂತೆ ಹೆಣ್ಣಿಗೂ ಹಲವು ಒಳಮನಸ್ಸು, ತನಗೇ ತಾನು ಅರ್ಥವಾಗದಂಥ, ತನ್ನೊಳಗೇ ಮುಚ್ಚಿಟ್ಟುಕೊಂಡಿರಬೇಕಾದ ರಹಸ್ಯಗಳು, ಯಾವುದನ್ನು ಯಾರಿಗೆ ಎಷ್ಟು ಬಿಟ್ಟುಕೊಡಬೇಕೆಂಬ ಗೊಂದಲ' ಎಂದೆಲ್ಲಾ ಹೇಳಿ ನನಗೆ ಬ್ಯಾಗಿನ ಮೇಲೆ ಯಾವತ್ತೂ ಇಲ್ಲದ ಭಾವುಕತೆಯನ್ನು ಹುಟ್ಟಿಸಿದ್ದರು. ಇದು ನನ್ನ ಮೇಲೆ ಬಹಳ ಪರಿಣಾಮ ಬೀರಿ ಬ್ಯಾಗು ಹಿಡಿದ ಗೆಳತಿಯರನ್ನು ಕಂಡಾಗಲೆಲ್ಲ ಅವರದ್ದು ಯಾವ ನಮೂನೆಯ ಮನಸ್ಸು ಇರಬಹುದೆಂಬ ಆಲೋಚನೆ ಮೂಡುತ್ತಿತ್ತು. ಮತ್ತೆ ಅದನ್ನು ಹೇಳಿಯೂ ಇರುತ್ತಿದ್ದೆ. ಅವರಿಗೂ ಹೌದೆನ್ನಿಸಿ ಭಾವುಕರನ್ನಾಗಿಸುತ್ತಿದ್ದುದು ಕಂಡು ನಾನು ಒಣಹೆಮ್ಮೆ ಪಡುತ್ತಿದ್ದೆ. ಆದರೆ ಇದನ್ನೇ ಬ್ಯಾಗುಗಳ ಪಾಗಲ್‌ಪ್ರೇಮಿ ಗೆಳತಿಗೆ ಶಾಪಿಂಗಿಗೆಂದು ಬೆಂಗಳೂರಿಗೆ ಬಂದಾಗ ಹೇಳಿದರೆ, 'ಇದೆಲ್ಲಾ ನನಗರ್ಥವಾಗದು. ಈ ಪುರಾಣವೇನಿದ್ದರೂ ನೀನೇ ಇಟ್ಟುಕೋ. ನನಗೀಗ ಎಲ್ಲರೂ ಮತ್ತೆ ನೋಡುವಂತಹ, ಎಲ್ಲಿ ತಗೊಂಡ್ರೀ ಎಂದು ಕೇಳುವಂಥ ಬ್ಯಾಗುಗಳು ಬೇಕು. ಎಲ್ಲಿ ಸಿಗುತ್ತವೆ ಹೇಳು. ಈಗಲೇ ಹೋಗೋಣ' ಎಂದು ನನ್ನ ಭಾವುಕತೆಯ ಬಲೂನಿಗೆ ಲೌಕಿಕತೆಯ ಸೂಜಿ ಚುಚ್ಚಿದಳು.



ಮತ್ತೆ ಯಾವ ಮಹಿಳೆಯರ ಬಳಿ ಈ ವಿಷಯ ಹೇಳಲು ಹೋಗಲಿಲ್ಲ. ■